1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.150/2023

ದಿಃ 06.07.2024

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-1

| | | |
|---|---|---|
| ಹೆಸರು | ಃ | ನಾಗಮ್ಮ |
| ತಂದೆಯ ಹೆಸರು | ಃ | ಮುನಿದಾಸಶೆಟ್ಟಿ ಉಃ ಮುನಿದಾಸಯ್ಯ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ವಾಡೆದೊಡ್ಡಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ.2 ಮತ್ತು 3 ನನ್ನ ಮಕ್ಕಳು.

2. ನನಗೆ ಚಾಸಾ.4 ಮತ್ತು 5 ಗೊತ್ತು.

3. ನಾನು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದೂ ಕೊರಮ ಜಾತಿಗೆ ಸೇರಿದವಳಾಗಿರುತ್ತೇನೆ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

5. ಆರೋಪಿತನಿಗೆ ನಮ್ಮ ಜಾತಿ ಗೊತ್ತು.

6. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 9.00 ಗಂಟೆ ಸಮಯದಲ್ಲಿ ನಾನು ಚಾಸಾ.2

ಈತನಿಗೆ ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ನನಗೆ ಡಿಕ್ಕಿ ಹೊಡೆಸಲು ಪ್ರಯತ್ನಿಸಿದ್ದು ವಿಫಲವಾಗಿರುತ್ತಾನೆ.

7. ಅದಕ್ಕೆ ನಾನು ಆರೋಪಿತನಿಗೆ ಕೇಳಲು, ಆತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

8. ಅದೂ ಅಲ್ಲದೇ ಚಾಸಾ.2 ಈತನಿಗೆ ಆರೋಪಿತನು ತನ್ನ ಕೈ ಮುಷ್ಟಿಯಿಂದ ಮುಖಕ್ಕೆ ಗುದ್ದಿರುತ್ತಾನೆ.

9. ಅದಲ್ಲದೇ, ನಮ್ಮ ಶೆಡ್ಡಿಗೆ ಬೆಂಕಿ ಹಾಕಿ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾನೆ.

10. ಆಗ ಆರೋಪಿತನು ನಮಗೆ ಕೊರಮ ಜಾತಿಯವರು ಎಂದು ಮೂದಲಿಸಿರುತ್ತಾನೆ.

11. ಆರೋಪಿತನು ನಮ್ಮ ಸೈಟಿನ ಪಕ್ಕದಲ್ಲಿಯೇ ಮನೆ ಕಟ್ಟಿದ್ದು ಆತನು ನಮ್ಮ ಸೈಟಿನಲ್ಲಿಯೇ ಹಾಯ್ದು ಹೋಗುತ್ತಿದ್ದುದ್ದರಿಂದ, ಅದನ್ನು ಕೇಳಿದ್ದಕ್ಕೆ ಆ ದ್ವೇಷ ಇಟ್ಟುಕೊಂಡು ನಮಗೆ ಹೀಗೆ ಮಾಡಿರುತ್ತಾನೆ.

12. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಒಂದು ದೂರನ್ನು ನೀಡಿರುತ್ತೇನೆ.

13. ಸದರಿ ದೂರನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು.

14. ಅದರ ಮೇಲೆ ನಾನು ನನ್ನ ಬೆರಳು ಮುದ್ರೆಯನ್ನು ಹಾಕಿರುತ್ತೇನೆ.

15. ನಂತರ ಮಾರನೇಯ ದಿನ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಒಂದು ಪಂಚನಾಮೆಯನ್ನು ಮಾಡಿ ಅದರ ಮೇಲೆ ನನ್ನ ಬೆರಳು ಮುದ್ರೆಯನ್ನು ಪಡೆದಿರುತ್ತಾರೆ.

16. ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು.

17. ಅದೇ ಸಮಯದಲ್ಲಿ ನಿ.ಪಿ.2ಕ್ಕೆ ಸಂಬಂಧಿಸಿದಂತೆ ಪೊಲೀಸರು ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿದ್ದು, ಅವುಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಕ್ರಮವಾಗಿ ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ</u>

18. ನನಗೆ ಇಬ್ಬರು ಮಕ್ಕಳು.

19. ಅವರಿಬ್ಬರೂ ನಮ್ಮ ಊರಿನಲ್ಲಿಯೇ ನನ್ನೊಂದಿಗೆ ವಾಸ ಮಾಡುತ್ತಾರೆ.

20. ನನ್ನ ಶೆಡ್ಡಿನ ಪೂರ್ವ ದಿಕ್ಕಿನಲ್ಲಿ ಪಂಚಾಯ್ತಿ ರಸ್ತೆವರೆಗೂ 50 ಅಡಿಯಷ್ಟು ಜಾಗ ಖಾಲಿ ಇರುತ್ತದೆ.

21. ನಮ್ಮ ಶೆಡ್ಡಿನ ದಕ್ಷಿಣಕ್ಕೆ ಆರೋಪಿತನ ಮನೆ ಇರುತ್ತದೆ.

22. ನಮ್ಮ ಮನೆಗೂ ಮತ್ತು ಆರೋಪಿತನ ಮನೆಗೂ ಮಧ್ಯ ಜಾಗ ಇದ್ದು, ಎಷ್ಟು ಇರುತ್ತದೆ ಎಂಬುದು ನನಗೆ ಹೇಳಲು ಬರುವುದಿಲ್ಲ.

23. ಆರೋಪಿತನ ಮನೆ ಪೂರ್ವಕ್ಕೆ ರಸ್ತೆಯವರೆಗೆ ಇರುತ್ತದೆ ಎಂದರೆ, ಅರ್ಧಕ್ಕೆ ಇರುತ್ತದೆ ಎಂದು ಹೇಳುತ್ತೇನೆ.

24. ಆರೋಪಿತನ ಮನೆ ರಸ್ತೆಗಿಂತಲೂ ಎತ್ತರಕ್ಕೆ ಕಟ್ಟೆ ಕಟ್ಟಿ ಅದರ ಮೇಲೆ ಮನೆ ಮಾಡಿರುತ್ತಾರೆ ಎನ್ನುವುದು ಸರಿ.

25. ಆ ಕಾರಣ, ಆರೋಪಿತನು ತನ್ನ ಮನೆಗೆ ನೇರವಾಗಿ ಹೋಗಲು ಸಾಧ್ಯವಾಗದೇ ಇದ್ದುದ್ದರಿಂದ ನಮ್ಮ ಖಾಲಿ ಜಾಗದಲ್ಲಿ ಹಾಯ್ದು ತನ್ನ ಮನೆಗೆ ಹೋಗುತ್ತಿದ್ದನು ಎನ್ನುವುದು ಸರಿ.

26. ಆ ವಿಚಾರವಾಗಿ ನಾನು ಪೊಲೀಸರಲ್ಲಿ ಹಲವಾರು ಬಾರಿ ಆರೋಪಿತನ ವಿರುದ್ದ ದೂರು ಸಲ್ಲಿಸಿರುತ್ತೇನೆ ಎಂದರೆ, ಆತನು ನಮಗೆ ತೊಂದರೆ ಕೊಟ್ಟಿರುವುದರಿಂದ ಕೊಟ್ಟಿರುತ್ತೇನೆ ಎಂದು ಹೇಳುತ್ತೇನೆ.

27. ಸದರಿ ಘಟನೆಯಾದ ನಂತರ ನಾನು ಮತ್ತು ನನ್ನ ಮಗ ಚಾಸಾ.2 ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ 4-5 ದಿನಗಳವರೆಗೆ ಚಿಕಿತ್ಸೆಯನ್ನು ಪಡೆದಿರುತ್ತೇವೆ.

28. ನಿ.ಪಿ.1ನ್ನು ನಾನೇ ಪೊಲೀಸ್ ಠಾಣೆಗೆ ಹೋಗಿ ಕೊಟ್ಟಿರುತ್ತೇನೆ.

29. ನನಗೆ ಓದಲು ಬರೆಯಲು ಬರುವುದಿಲ್ಲ.

30. ನಮ್ಮ ಪಕ್ಕದಲ್ಲಿ ಕುಳಿತಿದ್ದ ಯಾವುದೋ ಒಬ್ಬ ವ್ಯಕ್ತಿಯ ಮುಖಾಂತರ ನಿ.ಪಿ.1ನ್ನು ಬರೆಸಿರುತ್ತೇನೆ.

31. ಅದರಲ್ಲಿ ಆತನು ಏನು ಬರೆದಿರುತ್ತಾನೆ ಎಂಬುದು ನನಗೆ ಗೊತ್ತಿಲ್ಲ.

32. ಪೊಲೀಸರಿಗೆ ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೇನೆ.

33. ಪೊಲೀಸರು ಅಲ್ಲಿ ಫೋಟೋ ತೆಗೆದುಕೊಂಡು ಹೋಗಿ ರಕ್ಷಣೆ ನೀಡಿರುತ್ತಾರೆ.

34. ಅಷ್ಟನ್ನು ಹೊರತುಪಡಿಸಿ ಪೊಲೀಸರು ಸ್ಥಳದಲ್ಲಿ ಇನ್ನೇನನ್ನೂ ಮಾಡಿರುವುದಿಲ್ಲ.

35. ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ನನ್ನೊಂದಿಗೆ ಬೇರೆ ಯಾರೂ ಯಾವುದೇ ದಾಖಲಾತಿಯ ಮೇಲೆ ಸಹಿ ಮಾಡಿರುವುದಿಲ್ಲ.

36. ಆಗ ನಾನು ಒಬ್ಬಳೇ ಇದ್ದೆನು.

37. ಸರ್ಕಾರದಿಂದ ನನಗೆ ಪರಿಹಾರದ ಹಣ ಬಂದಿದ್ದು, ಅದರಿಂದಲೇ ಆರೋಪಿತನ ಮನೆಗೂ ನಮ್ಮ ಮನೆಗೂ ನಡುವೆ ಇರುವ ಖಾಲಿ ಜಾಗದಲ್ಲಿ ಕಾಂಪೌಂಡ್ ಕಟ್ಟಿಕೊಂಡಿರುತ್ತೇನೆ.

38. ಸದರಿ ಕಾಂಪೌಂಡ್‌ನ್ನು ಹಾಕಿಕೊಳ್ಳಲು ಸರ್ಕಾರದಿಂದ ಹಣವನ್ನು ಪಡೆಯುವ ಉದ್ದೇಶದಿಂದಲೇ ಆರೋಪಿತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

39. ನನಗೂ ಮತ್ತು ಚಾಸಾ.2 ಈತನಿಗೂ ಯಾವುದೇ ರೀತಿಯಲ್ಲಿ ಆರೋಪಿತನು ಹಲ್ಲೆ ಮಾಡಿರುವುದಿಲ್ಲ ಮತ್ತು ಅವಾಚ್ಯ

ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಜಾತಿ ನಿಂದನೆ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

40. ಆರೋಪಿತನು ಯಾವ ಕಾಲಕ್ಕೂ ನನಗೆ ತನ್ನ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ನನಗೆ ಗುದ್ದಿಸಲು ಪ್ರಯತ್ನಿಸಿರುವುದಿಲ್ಲವಾದರೂ ಸಹ, ಆತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.